

ವಿಶ್ವಪ್ರಸಿದ್ಧ ಉದಯಗಿರಿ ಗುಹೆಗಳು

ಈಗಿರುವ ದೇವಸ್ಥಾನ 11ನೇ ಶತಮಾನದ ಕೊನೆ ದಶಕಕ್ಕೆ ಸೇರಿದೆ ಎನ್ನಲಾಗಿದೆ. ಆರನೇ ಶತಮಾನದಲ್ಲಿಯೇ ಮೂಲ ದೇವಸ್ಥಾನ ಇದ್ದ ದಾಖಲೆಗಳು, 7ನೇ ಶತಮಾನದ ಸಂಸ್ಕೃತ ಪಠ್ಯಗಳಲ್ಲಿ ದೊರಕುತ್ತವೆ. ಕ್ರಿ.ಶ. 615–675ರವರೆಗೆ ಆಳಿದ ಲಾಲತ್ ಹಿಂದು ಕೇಶರಿ ಎಂಬ ರಾಜನು ಈ ದೇವಾಲಯಕ್ಕೆ ಅಡಿಪಾಯ ಹಾಕಿದ ಎಂದು ಜೇಮ್ಸ್ ಫರ್ಗ್ಯೂಸನ್ ಹೇಳುತ್ತಾನೆ. ಗರ್ಭಗುಡಿ ಮತ್ತು ದೇವಾಲಯದ ಗೋಪುರವನ್ನು 11ನೇ ಶತಮಾನದಲ್ಲಿ, ನೈವೇದ್ಯ ಸಭಾಂಗಣವನ್ನು 12ನೇ ಶತಮಾನದಲ್ಲಿ ನಿರ್ಮಿಸಲಾಗಿದೆ. ಮಂದಿರ ಸಂಪೂರ್ಣವಾಗುವ ಕಾಲಕ್ಕೆ ಜಗನ್ನಾಥ (ವಿಷ್ಣು) ಪಂಥ ಬೆಳೆಯುತ್ತಿತ್ತು. ಆಗ ಗಂಗ ವಂಶದ ರಾಜರು ವೈಷ್ಣವ ಧರ್ಮದ ಕೊನೆಯ ಅನುಯಾಯಿಗಳಾಗಿದ್ದು, 12ನೇ ಶತಮಾನದಲ್ಲಿ ಪುರಿಯಲ್ಲಿರುವ ಜಗನ್ನಾಥ ಮಂದಿರವನ್ನು ನಿರ್ಮಿಸಿರುವ ದಾಖಲೆಗಳಿವೆ.

ಕೇಂದ್ರ ದೇವಾಲಯದಲ್ಲಿರುವ ಲಿಂಗ ನೈಸರ್ಗಿಕ ಆಕಾರವಿಲ್ಲದ ಶಿಲೆಯಾಗಿದ್ದು, ಅದು ಶಕ್ತಿಯ (ಪಾರ್ವತಿ) ಮೇಲೆ ನಿಂತಿದೆ. ಅಂತಹ ಲಿಂಗವನ್ನು ಕೃತ್ತಿಬದ ಅಥವಾ ಸ್ವಯಂಭು ಎಂದು ಕರೆಯಲಾಗುತ್ತದೆ. ಇಂತಹ ಲಿಂಗಗಳು ಭಾರತದಲ್ಲಿ 64 ಸ್ಥಳಗಳಲ್ಲಿವೆ ಎಂದು ಹೇಳಲಾಗುತ್ತದೆ. ಇನ್ನೊಂದು ಮೂಲದ ಪ್ರಕಾರ, ಈ ಮಂದಿರವನ್ನು 11ನೇ ಶತಮಾನದಲ್ಲಿ ಸೋಮವಂಶಿ ರಾಜ, ಒಂದನೇ ಯಯಾತಿ ನಿರ್ಮಿಸಿದನು ಎನ್ನಲಾಗಿದೆ.

ಪ್ರತಿವರ್ಷ ಲಿಂಗರಾಜ ರಥೋತ್ಸವವನ್ನು ಅಶೋಕಷ್ಟಮಿಯಂದು ಆಚರಿಸಲಾಗುತ್ತದೆ. ದೇವರನ್ನು ರಾಮೇಶ್ವರ ದೇವುಲಾ ದೇವಾಲಯಕ್ಕೆ ಕೊಂಡೊಯ್ಯಲಾಗುತ್ತದೆ. ಸಾವಿರಾರು ಭಕ್ತರು ಲಿಂಗರಾಜ ಮತ್ತು ಆತನ ಸಹೋದರಿ ರುಕ್ಮಿಣಿಯ ವಿಗ್ರಹಗಳನ್ನು ರಥದಲ್ಲಿಟ್ಟು ಹಿಂಬಾಲಿಸುತ್ತಾರೆ. ನನ್ನನ್ನು ಕಾಡಿದ ಒಂದು ಪ್ರಶ್ನೆ: ಕಳಿಂಗ ರಾಜ್ಯವನ್ನು (ಇಂದಿನ ಒಡಿಶಾ) ನಾಶ ಮಾಡಿದ ಮೇಲೆ ಅಶೋಕ ಬೌದ್ಧ ಧರ್ಮವನ್ನು ಅಪ್ಪಿಕೊಂಡ. ಈ ಯುದ್ಧ ಮುಗಿದಿದ್ದು ಕ್ರಿ.ಪೂ. 261ರಲ್ಲಿ. ಅನಂತರ ಈ ಪ್ರದೇಶದಲ್ಲಿ ಬುದ್ಧನ ಸ್ತೂಪಗಳು ನಿರ್ಮಾಣವಾಗಲಿಲ್ಲವೇ?

ಮೌರ್ಯ ಸಾಮ್ರಾಜ್ಯ ಮತ್ತು ಊಳಿಗಮಾನ್ಯ ರಾಜ್ಯವಾದ ಕಳಿಂಗ ಅಥವಾ ಉತ್ಕಲ (ಒಡಿಶಾ ಮತ್ತು ಉತ್ತರ ಆಂಧ್ರ) ರಾಜ್ಯದ ನಡುವೆ ಭೀಕರ ಯುದ್ಧ ನಡೆಯಿತು. ಈ ಯುದ್ಧ 'ದಯಾ' ನದಿಯ ದಡದಲ್ಲಿರುವ ಧೌಲಿ ಗುಡ್ಡಗಳ ಮೇಲೆ ನಡೆದಿದೆ ಎಂದು ಊಹಿಸಲಾಗಿದೆ. ಇದು ಜಗತ್ತಿನ ಇತಿಹಾಸದಲ್ಲಿ ಒಂದು ಭೀಕರ ಯುದ್ಧವಾಗಿದೆ. ಈ ಯುದ್ಧ ಅಶೋಕನು ಪಟ್ಟ ಏರಿದ ಎಂಟನೇ ವರ್ಷದಲ್ಲಿ ಮುಗಿಯಿತು. ಯುದ್ಧ ಮುಗಿದ ನಂತರ ಅಶೋಕನು ಆಳವಾದ ಪಶ್ಚಾತ್ತಾಪ ಅನುಭವಿಸಿ ಬೌದ್ಧ ಧರ್ಮ ಸ್ವೀಕರಿಸಿದ.

ಶಿಲಾಶಾಸನವೊಂದರಲ್ಲಿ, ''ದೇವರ ಪ್ರೀತಿಪಾತ್ರ ರಾಜ 'ಪ್ರಿಯದರ್ಶಿ' ತನ್ನ ಪಟ್ಟಾಭಿಷೇಕದ 8 ವರ್ಷಗಳ ನಂತರ ಕಳಿಂಗ ರಾಜ್ಯ ಜಯಿಸಿದನು. ಒಂದೂವರೆ ಲಕ್ಷ ಜನರನ್ನು ಗಡಿಪಾರು ಮಾಡಲಾಯಿತು, ಒಂದು ಲಕ್ಷ ಜನರನ್ನು ಕೊಲ್ಲಲಾಯಿತು. ಕಳಿಂಗರನ್ನು ಜಯಿಸಿದ ನಂತರ, ದೇವತೆಗಳ ಪ್ರೀತಿಪಾತ್ರರು ಧರ್ಮದ ಕಡೆಗೆ ಬಲವಾದ ಒಲವು, ಧರ್ಮದ ಬಗ್ಗೆ ಪ್ರೀತಿ ಮತ್ತು ಉಪದೇಶ ಅನುಭವಿಸಿದರು. ಈಗ ಪ್ರಿಯವಾದ ದೇವತೆಗಳು ಕಳಿಂಗರನ್ನು ಗೆದ್ದಿದ್ದಕ್ಕಾಗಿ ಆಳವಾದ ಪಶ್ಚಾತ್ತಾಪ ಅನುಭವಿಸುತ್ತಾರೆ'' ಎಂದು ದಾಖಲಿಸಲಾಗಿದೆ. ಮೌರ್ಯರು ಮತ್ತು ಕಳಿಂಗರ ನಡುವೆ ಯುದ್ಧ ಮುಗಿದ ಮೇಲೆ, ಅಶೋಕನು ಪಶ್ಚಾತ್ತಾಪ ಪಟ್ಟು ಬೌದ್ಧ ಧರ್ಮ ಅಪ್ಪಿಕೊಂಡ ಸ್ಥಳದಲ್ಲಿ ಸ್ತೂಪವನ್ನು ನಿರ್ಮಾಣ ಮಾಡಲಾಗಿದೆ.

ಕಳಿಂಗವು ತನ್ನ ಉತ್ತುಂಗದ ಸ್ಥಿತಿಯಲ್ಲಿದ್ದಾಗ ಬಂದರುಗಳನ್ನು ಮತ್ತು ನುರಿತ ನೌಕಾಪಡೆಯನ್ನು ಅಭಿವೃದ್ಧಿಪಡಿಸಿತ್ತು ಮತ್ತು ಅದು ಬುಡಕಟ್ಟುಗಳ ಸಾಮ್ರಾಜ್ಯವಾಗಿತ್ತು. ನಂದ ವಂಶದ ರಾಜರ ಮಗಧ ರಾಜ್ಯ ಪತನದವರೆಗೂ (ಕ್ರಿ.ಪೂ. 321) ಕಳಿಂಗವು ಅವರ ಆಳ್ವಿಕೆಯಲ್ಲಿತ್ತು ಎನ್ನಲಾಗಿದೆ. ಅಶೋಕನ ಅಜ್ಜ ಚಂದ್ರಗುಪ್ತ ಮೌರ್ಯನು ಕಳಿಂಗದ ಮೇಲೆ ಅನೇಕ ಸಲ ದಾಳಿ ಮಾಡಿ ಅಸಫಲನಾಗಿ ಹಿಂದಕ್ಕೆ ಹೋಗಿದ್ದನು. ಕೆಲವು ವಿದ್ವಾಂಸರ ಪ್ರಕಾರ, ಮೌರ್ಯರು ತಮ್ಮ ರಾಜ್ಯವನ್ನು ವಿಸ್ತರಿಸಲು ಅಥವಾ ಮಧ್ಯಭಾರತದ ಪರ್ಯಾಯ ದ್ವೀಪದ ರಾಜ್ಯಗಳನ್ನು ವಶಪಡಿಸಿಕೊಳ್ಳಲು ಕಳಿಂಗ ರಾಜ್ಯ ಅಡ್ಡವಾಗಿ ನಿಂತಿತ್ತು.

ಪ್ರತಿಕ್ರಿಯಿಸಿ: feedback@sudha.co.in



ಲಿಂಗರಾಜ ಮಂದಿರ ಶಿಲ್ಪಕಲಾ ವೈಭವದ ಒಂದು ಮಾದರಿ

ಲಿಂಗರಾಜ ದೇಗುಲ